# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 8/2024**

**CW 2**

**PW5**

ಸಾಕ್ಷಿಯ ಹೆಸರು : ಉಮೇಶ್ ನ್ಯಾಕ್

ತಂದೆ ಹೆಸರು : ದಾಮೋದರ

ಪ್ರಾಯ : 51 ವರ್ಷ

ಉದ್ಯೋಗ : ಹೆಚ್.ಸಿ. , ಅಜೆಕಾರುಪೋಲೀಸ್ ಠಾಣೆ

ವಾಸ : ಅಜೆಕಾರು, ಕಾರ್ಕಳ

ದಿನಾಂಕ : **13.06.2025** ರಂದು ಪಿಡಬ್ಲ್ಯೂ - 5 / ಸಿಡಬ್ಲ್ಯೂ - 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು ಕಳೆದ 2021 ರಿಂದ ಇಲ್ಲಿಯವರೆಗೂ ಅಜೆಕಾರು ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 30.01.2022 ರಂದು ಬೆಳಗ್ಗೆ 7.15 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ಚಾಸಾ 3 ರವರ ಮುಖಾಂತರ ಕಳುಹಿಸಿದ ಫಿರ್ಯಾದನ್ನು ಸ್ವೀಕರಿಸಿ,

CC 8/2024
CW2
PW5

ಠಾಣಾ ಸಂಖ್ಯೆ 2/2022 ರಂದತೆ ಪ್ರಕರಣ ದಾಖಲಿಸಿ, ಮೂಲ ದೂರಿನ ಪ್ರತಿ ಮತ್ತು ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನೀಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ. 1 ರವರಿಗೆ ಹಸ್ತಾಂತರರಿಸಿರುತ್ತೇನೆ. ಈಗ ಸದರಿ ಮೂಲ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ - 1 ಎಂದು ಗುರುತಿಸಲಾಗಿದೆ. ಅದರಲ್ಲಿನ ನನ್ನ ನನ್ನ ಸಹಿಯನ್ನು ನಿಪಿ - 1(ಬಿ) ಎಂದು ಗುರುತಿಸಲಾಯಿತು. ಪ್ರ.ವ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ - 9 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿಪಿ - 9(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಕೆ.ಎಂ. ಆರೋಪಿ ಪರ ವಕೀಲರಿಂದಃ

ದೂರನ್ನು ಕುಕ್ಕುಜೆ ಗ್ರಾಮದ ದೊಡ್ಡರಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರ ದಿಂದ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಸ್ಥಳವು ನಮ್ಮ ಠಾಣೆಯಿಂದ 6 ರಿಂದ 7 ಕಿಲೋಮೀಟರ್ ದೂರವಿರುತ್ತದೆ. ಚಾಸಾ 1 ರವರು ನನಗೆ ಯಾವುದೇ ದೂರನ್ನು ಚಾಸಾ 3 ರವರ ಮುಖಾಂತರ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಪಡೆದು ಸುಳ್ಳು ಪ್ರ.ವ. ವರದಿಯನ್ನು

CC 8/2024
CW2
PW5

ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.